# ಭಾರತದ ಮಗಳು



ಪ್ರವೀಣ ಕುಲಕರ್ಣಿ

ಇದು ಸರಿಯಾಗಿ ಎಂಟು ವರ್ಷಗಳ ಹಿಂದಿನ ಘಟನೆ. ಟೀವಿಯಲ್ಲಿ ಆ ಘಟನೆಯನ್ನು ನೋಡಿದವರಿಗೆ ಆ ನೋಟ ಇನ್ನೂ ಹಸಿರಾಗಿರಲಿಕ್ಕೆ ಸಾಕು. ಭಾರತ–ಪಾಕಿಸ್ತಾನದ ವಾಘಾ ಗಡಿಯಿಂದ ದಾಟಿಬಂದ 'ಭಾರತದ ಮಗಳು' ತಲೆಬಾಗಿಸಿ ತವರಿನ ನೆಲಕ್ಕೆ ನಮಿಸಿದ ಕ್ಷಣ ಅದಾಗಿತ್ತು. ಆಗಿನ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರು ಆ ಯುವತಿಯನ್ನು ಆಲಿಂಗಿಸಿ, ಬರಮಾಡಿಕೊಂಡಿದ್ದ ಆ ಕ್ಷಣ ದೇಶವಾಸಿಗಳ ಪಾಲಿಗೆ ಒಂದು ಭಾವುಕ ಕ್ಷಣವಾಗಿತ್ತು. ಹಾಗೆ ಗಡಿಯನ್ನು ದಾಟಿ ಬಂದ ಉಸ್ಮಾ ಅಹ್ಮದ್‌ಗೆ ಅಂದು ಮೃತ್ಯುಕೂಪವನ್ನೇ ದಾಟಿ ಬಂದ ಅನುಭವವಾಗಿತ್ತು. 'ನಾನು ಬದುಕಿ ಬಂದಿದ್ದೇ ಒಂದು ದೊಡ್ಡ ಪವಾಡ' ಎಂದು ಆಕೆ, ಹರ್ಷದ ಕಣ್ಣೀರು ಸುರಿಸುತ್ತಾ ಹೇಳಿದ್ದರು.

ಉಸ್ಮಾ ಅವರ ಆ 'ಪವಾಡ'ದ ಕಥೆಯನ್ನು ಈಗ ಮತ್ತೆ ನೆನಪಿಸಿಕೊಳ್ಳಲು ಕಾರಣವಿದೆ. ಜಾನ್ ಅಬ್ರಹಾಂ ಅವರ 'ದಿ ಡಿಪ್ಲೊಮ್ಯಾಟ್' ಚಿತ್ರ ಈ 'ಭಾರತದ ಮಗಳ' ಕಥೆಯನ್ನು ತೆರೆಯ ಮೇಲೆ ತಂದಿದೆ. ದೇಶದ ಮುಂದೆ ಉಸ್ಮಾ ಈಗ ಮತ್ತೆ ಸೆಲೆಬ್ರಿಟಿಯಾಗಿ ಕಂಗೊಳಿಸುತ್ತಿದ್ದಾರೆ. ಅವರು ಪಾಕಿಸ್ತಾನಕ್ಕೆ ಹೋಗಿ 'ಮೃತ್ಯುಕೂಪ'ದಲ್ಲಿ ಸಿಲುಕಿದ್ದು, ಅಲ್ಲಿಂದ ಭಾರತೀಯ ರಾಯಭಾರಿ ಕಚೇರಿಯ ನೆರವು ಪಡೆದು ಭಾರತಕ್ಕೆ ವಾಪಸ್ ಬಂದಿದ್ದಂತೂ ಒಂದು ರೋಚಕ ಕಥೆ. ಈ ಯುವತಿಯು ಮಲೇಷ್ಯಾಕ್ಕೆ ಹೋಗಿದ್ದಾಗ, ಅವರಿಗೆ ಕಾರು ಚಾಲಕನಾಗಿದ್ದ ಪಾಕಿಸ್ತಾನದ ತಾಹಿರ್ ಅಲಿ ಎಂಬಾತನ ಪರಿಚಯ ಆಗಿತ್ತು. ಉಸ್ಮಾ ಅವರ ಮಗಳು ತಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿರುವ ಮಾಹಿತಿ ಗೊತ್ತಾಗಿ, ತನ್ನ ಊರಿನಲ್ಲಿ ಅದಕ್ಕೆ ಪ್ರಕೃತಿ ಚಿಕಿತ್ಸೆ ಲಭ್ಯವಿದೆ ಎಂಬ ಸುಳ್ಳು ಮಾಹಿತಿಯನ್ನು ತಾಹಿರ್ ನೀಡಿದ್ದ. ಪಾಕಿಸ್ತಾನಕ್ಕೆ ಬರುವಂತೆ ಒತ್ತಾಯಿಸಿದ್ದ. ಮಗಳ ಮೇಲೆ ಆತ ತೋರಿದ ಕಾಳಜಿ ಕಂಡು ಉಸ್ಮಾ ಕೂಡ ಆತನೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದರು. ಇಬ್ಬರೂ ಮದುವೆಯಾಗಲೂ ಉದ್ದೇಶಿಸಿದ್ದರು.

ಭಾರತಕ್ಕೆ ಮರಳಿದ ಕೂಡಲೇ ಪಾಕಿಸ್ತಾನಕ್ಕೆ ಹೋಗಿ ಬರಬೇಕು ಎಂಬ ಬಲವಾದ ಒತ್ತಾಸೆ ಉಸ್ಮಾ ಮನಸ್ಸಿನಲ್ಲಿ ಮೂಡಿತ್ತು. ಭಾರತಕ್ಕೆ ಬಂದು ಸ್ವಲ್ಪೇ ಸಮಯದಲ್ಲಿ ಪಾಕಿಸ್ತಾನದ ಪ್ರವಾಸಿ ವೀಸಾ ಗಿಟ್ಟಿಸಿಕೊಂಡ ಅವರು, ವಾಘಾ ಗಡಿ ದಾಟಿ ಆ ದೇಶಕ್ಕೆ ಹೊರಟೇಬಿಟ್ಟರು. ಉಸ್ಮಾ ಅವರನ್ನು ಕರೆದೊಯ್ಯಲು ಗಡಿವರೆಗೆ ಬಂದಿದ್ದ ತಾಹಿರ್, ಅವರಿಗೆ ನಿದ್ರೆ ಮಾತ್ರೆ ನುಂಗಿಸಿ, ಒಂದೊಮ್ಮೆ ತಾಲಿಬಾನಿ ಉಗ್ರರ ನೆಲೆಯಾಗಿದ್ದ ಬುನೇರ್ ಎಂಬ ಅಪಾಯಕಾರಿ ತಾಣಕ್ಕೆ ಅವರನ್ನು ಕರೆದೊಯ್ದಿದ್ದ. ಬುನೇರ್ ತಲುಪಿದ ಕೂಡಲೇ ತಾನು ಅಪಾಯದಲ್ಲಿ ಸಿಲುಕಿರುವುದು ಉಸ್ಮಾ ಅವರ ಗಮನಕ್ಕೆ ಬಂದಿತ್ತು. ತಾಹಿರ್‌ಗೆ ಅದಾಗಲೇ ಮದುವೆಯಾಗಿ ಮಕ್ಕಳನ್ನೂ ಹೊಂದಿದ್ದ ಸಂಗತಿಯೂ ಗೊತ್ತಾಯಿತು. ತಾನು ಮೋಸ ಹೋಗಿರುವುದು ಅವರಿಗೆ ಮನವರಿಕೆಯಾಗಿತ್ತು. ಆತನ ಮನೆಯ ಹೆಣ್ಣುಮಕ್ಕಳು, ಉಸ್ಮಾ ಅವರನ್ನು ಅಮಾನುಷವಾಗಿ ನಡೆಸಿಕೊಂಡರು. ಚಿತ್ರಹಿಂಸೆ ನೀಡಿದರು. ಈ ಯುವತಿಯನ್ನು ಮಾರಾಟ ಮಾಡಲೂ ತಾಹಿರ್ ಹವಣಿಸಿದ. ವ್ಯಾಪಾರ ಕುದುರದಿದ್ದಾಗ ತಾನೇ ಮದುವೆಯಾಗಲು ನಿರ್ಧರಿಸಿದ. ಉಸ್ಮಾ ಅದಕ್ಕೆ ಒಪ್ಪದಿದ್ದಾಗ ಪಿಸ್ತೂಲ್ ತೋರಿಸಿ, ಬೆದರಿಸಿ ಬಲವಂತದಿಂದ ಮದುವೆಯಾದ. ಭಾರತದ ಈ ಯುವತಿಗೆ ಇನ್ನಿಲ್ಲದಂತೆ ಚಿತ್ರಹಿಂಸೆ ನೀಡಿದ. ಸುಳ್ಳಿನ ಬಲೆಯಲ್ಲಿ ಸಿಲುಕಿ ನಲುಗಿಹೋಗಿದ್ದ ಅವರಿಗೆ ಪದೇ ಪದೇ ಮತ್ತು ಬರಿಸುವ ಔಷಧ ಉಣಿಸಿ, ಅತ್ಯಾಚಾರ ಎಸಗಿದ. ನರಕಯಾತನೆಯಿಂದ ಹೊರಬರುವ ದಾರಿ ಯಾವುದೆಂದು ತಿಳಿಯದೆ ಆಕೆ ಕಂಗಾಲಾಗಿದ್ದರು. ಮಗಳಿಗಾಗಿ ಬದುಕಬೇಕು, ಮಗಳನ್ನು ಬದುಕಿಸಿಕೊಳ್ಳಬೇಕು ಎಂಬ ಆಸೆಯಿಂದ ಹೇಗಾದರೂ ಮಾಡಿ ಈ ಬಲೆಯಿಂದ ತಪ್ಪಿಸಿಕೊಳ್ಳಬೇಕು ಎಂದು ಹವಣಿಸುತ್ತಿದ್ದರು.

ಉಸ್ಮಾ ಅವರಂತೆಯೇ 'ಟ್ರ್ಯಾಪ್'ಗೆ ಒಳಗಾಗಿ ಹಲವು ಮಹಿಳೆಯರು ಅಲ್ಲಿ ಬಂಧಿಯಾಗಿದ್ದರು. ತಪ್ಪಿಸಿಕೊಂಡು ಎಲ್ಲಿಯೂ ಹೋಗಲಾರದಂತಹ ಗುಡ್ಡಗಾಡಿನ ಪ್ರದೇಶ ಅದಾಗಿತ್ತು. ಸಾರಿಗೆ ಸೌಲಭ್ಯವಾಗಲಿ, ಜನಸಂಚಾರವಾಗಲಿ ಇಲ್ಲದಂತಹ ಆ ತಾಣದಲ್ಲಿ ಬಂದೂಕುಗಳೇ ಮಾತನಾಡುತ್ತಿದ್ದವು. ಹೊರಬರಲೂ ಆಗದೆ, ಅಲ್ಲಿ ಉಳಿಯಲೂ ಆಗದೆ ಪರಿತಪಿಸುತ್ತಿದ್ದ ಉಸ್ಮಾ ಅವರಿಗೆ, ತಮ್ಮಂತೆಯೇ ಅಲ್ಲಿ ಸಿಲುಕಿಕೊಂಡಿದ್ದ ಮಹಿಳೆಯೊಬ್ಬರ ನೆರವು ಸಿಕ್ಕಿತು. ಆ ಮಹಿಳೆಯ ಮೊಬೈಲ್ ಪಡೆದು, ಮಲೇಷ್ಯಾದಲ್ಲಿದ್ದ ತನ್ನ ಸಂಬಂಧಿಗೆ ಕರೆ ಮಾಡಿದ ಉಸ್ಮಾ, ತಾನು ಅಪಾಯದಲ್ಲಿ ಸಿಲುಕಿಕೊಂಡಿರುವ ಕಥೆಯನ್ನು ವಿವರಿಸಿ ಹೇಳಿದರು. 'ನೀನು ಅಲ್ಲಿಂದ ಹೊರಬರುವ, ಮರಳಿ ಭಾರತ ಸೇರುವ ಏಕೈಕ ಹಾದಿಯೆಂದರೆ ಹೇಗಾದರೂ ಮಾಡಿ, ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ತಲುಪುವುದು' ಎಂದು ಆ ಸಂಬಂಧಿ ಸಲಹೆ ನೀಡಿದರು.

'ಮದುವೆಯಾದಮೇಲೆವರದಕ್ಷಿಣೆನೀಡುವುದು ಭಾರತದಲ್ಲಿ ಪದ್ಧತಿ. ನನ್ನ ಸಹೋದರನೊಬ್ಬ ಇಸ್ಲಾಮಾಬಾದ್‌ನ ರಾಯಭಾರಿ ಕಚೇರಿಯಲ್ಲಿದ್ದು, ವರದಕ್ಷಿಣೆ ತಂದಿದ್ದಾನೆ. ನೀನು ಇಚ್ಛಿಸಿದರೆ ಹೋಗಿ ತರೋಣ' ಎಂದು ಉಸ್ಮಾ ಚಾಣಾಕ್ಷವಾಗಿ ಹೇಳಿದ್ದೇ ತಡ, ದುಡ್ಡಿನ ಹಪಹಪಿಯಲ್ಲಿದ್ದ ತಾಹಿರ್, ಅವರನ್ನು ಕರೆದುಕೊಂಡು ಭಾರತೀಯ ರಾಯಭಾರಿ ಕಚೇರಿಗೆ ಬಂದುಬಿಟ್ಟ. ಒಳಹೊಕ್ಕ ಉಸ್ಮಾ, ಅಲ್ಲಿನ ರಾಯಭಾರಿ ಜೆ.ಪಿ. ಸಿಂಗ್ ಅವರಿಗೆ ತನ್ನ ಪರಿಸ್ಥಿತಿಯನ್ನು ವಿವರಿಸಿದರು. 'ಈಕೆ ಏನಾದರೂ ಗೂಢಚಾರಿ ಇರಬಹುದಾ' ಎಂದು ಸಂಶಯಿಸಿದ ಸಿಬ್ಬಂದಿ, ಅವರ ಹಿನ್ನೆಲೆಯನ್ನು ಸಮಗ್ರವಾಗಿ ಪರಿಶೀಲಿಸಿ, ಅವರ ಹೇಳಿಕೆಯಲ್ಲಿ ಸತ್ಯಾಂಶವಿದೆ ಎಂದು ಅರಿತುಕೊಂಡರು. ಜೆ.ಪಿ. ಸಿಂಗ್, ಈ ಯುವತಿಗೆ ರಾಯಭಾರ ಕಚೇರಿಯಲ್ಲಿ ಆಶ್ರಯ ನೀಡುವ ದಿಟ್ಟ ನಿರ್ಣಯ ಕೈಗೊಂಡರು. ಸುಷ್ಮಾ ಸ್ವರಾಜ್ ಅವರಿಗೆ ಈ ಕುರಿತು ಮಾಹಿತಿ ನೀಡಿದಾಗ, ಅವರೂ ಬೆಂಬಲಿಸಿದರು. ಉಸ್ಮಾ ಅವರಿಗೆ ವಕೀಲರನ್ನು ನೇಮಿಸಿಕೊಟ್ಟ ಭಾರತ ಸರ್ಕಾರ, ರಾಜತಾಂತ್ರಿಕವಾಗಿಯೂ ಚಾಣಾಕ್ಷ ಹೆಜ್ಜೆಯಿಟ್ಟು, ಕೋರ್ಟ್‌ನಿಂದ ಅನುಮತಿ ಪಡೆದು ಅವರನ್ನು ತವರಿಗೆ ಕರೆತಂದಿತು.

ಉಸ್ಮಾ, ತವರಿಗೆ ಬಂದ ಬಳಿಕ ಅವರ ತಂದೆ–ತಾಯಿ ಅವರನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. ಸಂಪರ್ಕವನ್ನೂ ಇಟ್ಟುಕೊಳ್ಳದೆ ದೇಶದಿಂದಲೇ ವಲಸೆ ಹೊರಟರು. ಉಳಿದ ಸಂಬಂಧಿಗಳೂ ಅವರ ನೆರವಿಗೆ ಬರಲಿಲ್ಲ. ಇದರಿಂದ ಆಕೆ ಎದೆಗುಂದಲಿಲ್ಲ. ದೆಹಲಿಯಲ್ಲಿ ಬ್ಯೂಟಿ ಪಾರ್ಲರ್ ತೆರೆದರು, ಮಗಳ ಚಿಕಿತ್ಸೆ ಕಡೆಗೆ ನಿಗಾ ವಹಿಸಿದರು. ಈಗ ಅವರ ಪಾರ್ಲರ್ ಚೆನ್ನಾಗಿ ನಡೆಯುತ್ತಿದ್ದು, ಅದರಲ್ಲಿಯೇ ಉಸ್ಮಾ ಬ್ಯುಸಿ ಆಗಿದ್ದಾರೆ. 'ದಿ ಡಿಪ್ಲೊಮ್ಯಾಟ್' ಸಿನಿಮಾದಿಂದ ಹಕ್ಕುಸ್ವಾಮ್ಯದ ರೂಪದಲ್ಲಿ ದೊಡ್ಡ ಮೊತ್ತವೂ ಅವರಿಗೆ ಸಂದಾಯವಾಗಿದೆ. ಜೆ.ಪಿ. ಸಿಂಗ್ ಹಾಗೂ ಸುಷ್ಮಾ ಸ್ವರಾಜ್ ಅವರನ್ನು ನೆನೆಯುತ್ತಾ ಬದುಕು ಸಾಗಿಸುತ್ತಿದ್ದಾರೆ. 'ಪಾಕಿಸ್ತಾನದಲ್ಲಿ ನನ್ನಂತೆ 'ಟ್ರ್ಯಾಪ್'ಗೆ ಒಳಗಾಗಿ ನರಕಯಾತನೆ ಅನುಭವಿಸುತ್ತಿರುವವರ ಸಂಖ್ಯೆ ದೊಡ್ಡದಿದೆ. ಆದರೆ, ಅದರಿಂದ ಎಲ್ಲರಿಗೂ ಹೊರಬರಲು ನನ್ನಂತೆ ಅದೃಷ್ಟವಿಲ್ಲ' ಎಂದು ಅವರು ನೋವಿನಿಂದ ಹೇಳುತ್ತಾರೆ. ಉಸ್ಮಾ ಅವರದು ನಿಜಕ್ಕೂ ಸಿನಿಮಾದಂತಹ ಕಥೆ. ಈಗ ಆ ಕಥೆ ಸಿನಿಮಾ ಆಗಿ ಜನರ ಮುಂದಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65